Rotary 2024-25

THE MAGIC OF ROTARY

ಮಿಡ್‌ಟೌನ್ ನ್ಯೂಸ್

# Midtown News

In House Bulletin of Rotary Club Shimoga Mid Town

R.I. President : Rtn. Stephanie A. Urchick
Dist. Governor : Rtn. Dev Anand
Asst. Governor : Rtn. Nagaraj S.R.
President : Rtn. Suresh Kumar D.
Secretary : Rtn. Faheem Hussain
Director : Rtn. Badriprasad T.A.
Editor : Rtn. Meera Nadig
Co-Chairmen : Rtn. Anand I.R.
Members : Rtn. G.N.N. Murthy, Rtn. Faheem Hussain

We meet on 2nd, 3rd and 4th Thursday at Rotary Mid Town Hall, SHIVAMOGGA-577201 rotaryshimogamidtown@gmail.com

Vol. 41 9 - 1 - 2025 ISSUE 21

## VOCATIONAL SERVICE MONTH

### ದಿನಾಂಕ 28-12-2024ರ ಮುಂದೂಡಿದ ವಾರದ ಸಭೆಯ ವರದಿ

ದಿನಾಂಕ 28-12-2024 ರ ಸಭೆಯು ಮುಂದೂಡಿ ವಾರದ ಹೊಸ ವರ್ಷಾಚರಣೆ ಮತ್ತು ಕೌಟುಂಬಿಕ ಸಭೆಯಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಅಧ್ಯಕ್ಷರಾದ ರೊ. ಸುರೇಶ್ ಕುಮಾರ್ ಡಿ. ಇವರು ವಹಿಸಿದ್ದರು ಹಾಗೂ ಸಭೆಗೆ ಆಗಮಿಸಿದ್ದ ಎಲ್ಲಾ ರೋಟರಿ ಕುಟುಂಬ ಸದಸ್ಯರನ್ನು ಆಹ್ವಾನಿಸಿದರು.



ಮೊದಲಿಗೆ ಮಾಜಿ ಪ್ರಧಾನ ಮಂತ್ರಿ ಶ್ರೀ ಮನಮೋಹನ್ ಸಿಂಗ್ ಇವರ ನಿಧನಕ್ಕಾಗಿ ಒಂದು ನಿಮಿಷದ ಮೌನಾಚರಣೆ ಮಾಡಲಾಯಿತು. ನಂತರ ಆನ್ಸ್ ಕ್ಲಬ್ಬಿನ ಅಧ್ಯಕ್ಷರಾದ ಆ್ಯನ್ ಅನುರಾಧ ಮೂರ್ತಿ ಇವರ ಪ್ರಾರ್ಥನಾ ಗೀತೆಯೊಂದಿಗೆ ಇಂದಿನ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಕ್ಲಬ್ಬಿನ ನೂತನ ಸದಸ್ಯರಾದ ರೊ. ಶಿಲ್ಪ ಹೆಚ್.ಜಿ. ಇವರು ರೋಟರಿ ಮಾಹಿತಿಯನ್ನು ವಾಚಿಸಿದರು.



ಅಧ್ಯಕ್ಷರು ತಮ್ಮ ಪ್ರಕಟಣೆಯಲ್ಲಿ ಜನವರಿ 24ರಂದು ನಡೆಯಲಿರುವ ರೋಟರಿ ಸಮ್ಮೇಳನಕ್ಕೆ ನೊಂದಾಯಿಸುಕೊಳ್ಳುವಂತೆ ಮನವಿ ಮಾಡಿಕೊಂಡರು. ತಮ್ಮ ಹೆಸರುಗಳನ್ನು ಆದಷ್ಟು ಬೇಗ ನಿಯೋಜಿತ ಅಧ್ಯಕ್ಷರಾದ ರೊ. ಹರ್ಷಾ ಕಾಮತ್‌ರವರಲ್ಲಿ ನೀಡಬೇಕೆಂದು ಸೂಚಿಸಿದರು.

ಡಿಸೆಂಬರ್ ತಿಂಗಳಿನಲ್ಲಿ ಹುಟ್ಟು ಹಬ್ಬ ಮತ್ತು ವಿವಾಹ



ವಾರ್ಷಿಕೋತ್ಸವವನ್ನು ಆಚರಿಸಿಕೊಂಡ ಸದಸ್ಯರುಗಳನ್ನು ಹಾಗೂ ಆ್ಯನ್ಸ್ ಸದಸ್ಯರುಗಳನ್ನು ವೇದಿಕೆಗೆ ಆಹ್ವಾನಿಸಿ ಅಭಿನಂದಿಸಲಾಯಿತು. ಇಂದಿನ ದಿನದ ಭೋಜನ ಆತಿಥ್ಯ ವಹಿಸಿಕೊಂಡ ಸದಸ್ಯರುಗಳನ್ನು ವೇದಿಕೆಗೆ ಆಹ್ವಾನಿಸಿ

## ವಾರದ ಸಭೆ

ದಿನಾಂಕ : **9-1-2025, ಗುರುವಾರ**

ಸಮಯ : **ಸಂಜೆ 7.30ಕ್ಕೆ**

ವಿಷಯ : **ಕ್ಲಬ್ ಅಫೇರ್ಸ್**




ಗೌರವಿಸಲಾಯಿತು.

ಕಾರ್ಯಕ್ರಮದ ಮುನ್ನ ನಡೆಸಿದ ಆಟಗಳಲ್ಲಿ ವಿಜೇತರಾದ ಸ್ಪರ್ಧಿಗಳನ್ನು ವೇದಿಕೆಗೆ ಆಹ್ವಾನಿಸಿ ಬಹುಮಾನ ವಿತರಿಸಲಾಯಿತು.

ಹೊಸ ವರ್ಷದ ಆಚರಣೆಯ ಸಲುವಾಗಿ ಇಂದಿನ ಕಾರ್ಯಕ್ರವನ್ನು ರೋಟರಿ ರಕ್ತನಿಧಿಯ ಮೇಲ್ಚಾವಣಿಯಲ್ಲಿ ಆಯೋಜಿಸಲಾಗಿತ್ತು. ಹಲವಾರು ಮನೋರಂಜನಾ ಆಟಗಳು ಹಾಗೂ ದಂಪತಿಗಳಿಗೆ ಮತ್ತು ರೋಟರಿ ಸದಸ್ಯರಿಗೆ ಹಾಗೂ ಆ್ಯನ್ ಸದಸ್ಯರಿಗೆ ರ್‍ಯಾಂಪ್ ವಾಕ್ ಆಯೋಜಿಸಲಾಗಿತ್ತು. ಇದರಲ್ಲಿ ಗೆದ್ದ ಸದಸ್ಯರಿಗೆ ಬಹುಮಾನವನ್ನು ವಿತರಿಸಲಾಯಿತು. ಈ ಕಾರ್ಯಕ್ರಮಕ್ಕೆ ತೀರ್ಪುಗಾರರಾಗಿ ಡಾ|| ಮೈನಾ ಮತ್ತು ಶ್ರೀಮತಿ ಶ್ವೇತ ಇವರುಗಳು ಆಗಮಿಸಿದ್ದರು.

- 2ನೇ ಪುಟಕ್ಕೆ

- 1ನೇ ಪುಟದಿಂದ











ರೊ. ಪ್ರಕಾಶ್ ಡಿ.ವಿ. ಮತ್ತು ನೂತನ ಸದಸ್ಯರಾದ ರೊ. ಶ್ರೀನಾಗ್ ಇವರು ಇಂದಿನ ಸಭೆಯ ಹಾಜರಾತಿ ಬಹುಮಾನಕ್ಕೆ ಪಾತ್ರರಾದರು. ಕೊನೆಯಲ್ಲಿ ಕಾರ್ಯದರ್ಶಿಗಳಾದ ರೊ. ಫಹೀಂ ಹುಸೇನ್ ವಂದನಾರ್ಪಣೆಯನ್ನು ನೆರವೇರಿಸಿದರು.




ಡಿಸೆಂಬರ್ 31ರಂದು ಮಾರುತಿ ಇಂಟರಾಕ್ಟ್ ಕ್ಲಬ್, ಹೊಳಲೂರಿನಲ್ಲಿ ಶಂಕರ ಕಣ್ಣಿನ ಆಸ್ಪತ್ರೆಯ ಸಹಯೋಗದೊಂದಿಗೆ ಉಚಿತ ನೇತ್ರ ತಪಾಸಣಾ ಶಿಬಿರವನ್ನು ಶಾಲೆಯ ಮಕ್ಕಳಿಗೆ ಏರ್ಪಡಿಸಲಾಗಿತ್ತು. ಶಾಲೆಯ ಎಲ್ಲಾ ವಿದ್ಯಾರ್ಥಿಗಳು ಇದರ ಸದುಪಯೋಗವನ್ನು ಪಡೆದುಕೊಂಡರು.

## ROTARY INFORMATION

### ROTARY AND THE UNITED NATIONS



**Rtn. Shilpa H.G.**

During and after World War II, Rotarians became increasingly involved in promoting international understanding. In 1945, 49 Rotary members served in 29 delegations to the United Nations Charter Conference. Rotary still actively participates in UN conferences by sending observers to major meetings and promoting the United Nations in Rotary publications. Rotary International's relationship with the United Nations Educational, Scientific, and Cultural Organization (UNESCO) dates back to a 1943 London Rotary conference that promoted international cultural and educational exchanges. Attended by ministers of education and observers from around the world, and chaired by a past president of RI, the conference was an impetus to the establishment of UNESCO in 1946.



ದಿನಾಂಕ 5-1-2025ರ ಭಾನುವಾರದಂದು ರಕ್ತನಿಧಿ ಸಭಾಂಗಣದಲ್ಲಿ ರೋಟರಿ ಮಿಡ್‌ಟೌನ್ ಡಯಾಬಿಟಿಕ್ ಸೆಲ್ಫ್‌ಕೇರ್‌ನ ಬೆಳ್ಳಿ ಮಹೋತ್ಸವ ವರ್ಷಾಚರಣೆ ಹಾಗೂ ಮಧುಮೇಹ ಕುರಿತು ಮಾಹಿತಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಸೆಲ್ಫ್‌ಕೇರ್‌ನ ಛೇರ್‌ಮನ್‌ರಾದ ರೊ. ಎ. ಶಿವರಾಮಕೃಷ್ಣ ಇವರು ಮಾತನಾಡಿ ಶಿಸ್ತುಬದ್ಧ ಜೀವನಶೈಲಿಯಿಂದ ಮಧುಮೇಹ ನಿಯಂತ್ರಣ ಸಾಧ್ಯ ಎಂದು ಅಭಿಪ್ರಾಯ ಪಟ್ಟರು.

### 4 WAY TEST

**of the things we think, say or do :**

1. Is it the **TRUTH?**
2. Is it **FAIR** to all concerned?
3. Will it build **GOODWILL** and **BETTER FRIENDSHIPS**?
4. Will it be **BENEFICIAL** to all concerned?



**MARRIAGE ANNIVERSARY** *Greetings to*

Rtn. Shivashankar K.G. Jan-03
Ann. Revathi



**ANN BIRTHDAY** *Greetings to*

| | |
|---|---|
| Ann. Madhumathi Narahari | Jan-04 |
| Ann. Nayana Ramesh G.C. | Jan-05 |
| Ann. Veena Sumanth | Jan-09 |

Printed at : A.S.R. Offset Printers, #4, Dargah Complex, Tilak Nagar Main Road, SHIMOGA-577201, Ph : 278764